ಶ್ರೀ ಕೆ. ಬಿ ಶಿವಯ್ಯ.—ಈಗ ಮುತ್ತೂ ಪಬ್ಲಿಕ್ ಡೊನೇಷನ್‌ನಿಂದ ಹಣ ಬಂದರೆ 100 ಹಾಸಿಗೆಗೆ ಪರಿವರ್ತನೆ ಮಾಡುವುದಕ್ಕೆ ತಮ್ಮ ಅಭ್ಯಂತರ ಇದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಅವಶ್ಯಕತೆ ಇದ್ದರೆ 100 ಅಲ್ಲದಿದ್ದರೆ 150 ಮಾಡೋಣ.

Sites granted in Hassan City

429 SRI K. H. HANUME GOWDA (Hassan).—Will the Minister for Municipal Administration and Political Pensions be pleased to state.—

(*a*) the number of houseless and siteless residents in Hassan City ;

(*b*) the number of persons who have been granted sites in Hassan City during the last one year ;

(*c*) the addresses of the said persons ;

(*d*) their annual income ;

(*e*) their profession ?

SRI D. K. NAIKER (Minister for Municipal Administration and Political Pensions).—

(*a*) 1113.

(*b*) 122 Sites have been granted.

(*c*) The details are shown in the statement placed on the table of the House. **

(*d*) do

(*e*) do

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, 1113 ಜನರ ಪೈಕಿ. 122 ಜನರಿಗೆ ಸೈಟುಗಳನ್ನು ಮಂಜೂರ್ಮಾಡಲಾಗಿದೆ ಎಂದು ಹೇಳಿದ್ದೀರಿ. ಮುನಿಸಿಪಾಲಿಟಿಯವರು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ ಎನ್ನುವ ವರ್ತಮಾನ ಕೇಳಿದೆ. ಸರ್ಕಾರ ಫೈನರ್ ಮಾಡಿದ ಮೇರೆ ಸೈಟ್ ಕೊಟ್ಟಿದ್ದೀರಾ ?

ಶ್ರೀ ಡಿ. ಕೆ. ನಾಯ್ಕರ್.—ನನ್ನ ಜ್ಞಾಪಕಕ್ಕೆ ಇನ್ನೂವರೆಗೆ ಬಂದಿಲ್ಲ.

ಶ್ರೀ ಕೆ. ಹೆಚ್ ಹನುಮೇಗೌಡ.—ಅಧ್ಯಕ್ಷರೇ, ನಾಳೆ ಬೇಕಾದರೆ ಉತ್ತರ ಹೇಳಲಿ.

ಶ್ರೀ ಕೋಣಂದೂರು ಲಿಂಗಪ್ಪ.—ಸಂಬಂಧಪಟ್ಟ ಫೈಲಿನ ಜವಾಬ್ದಾರಿ ಮಂತ್ರಿಗಳಿಗೆ ಸೇರಿದ್ದೋ ನಮಗೆ ಸೇರಿದ್ದೋ ?

ಶ್ರೀ ಸಿ. ಬೈರೇಗೌಡ.—ಮರೆಯುವ ಮಂತ್ರಿಗಳು ಮನೆಯಲ್ಲಯೇ ಇರಲಿ.

ಅಧ್ಯಕ್ಷರು.—ನೀವು ಏನೂ ಮರೆಯುವುದಿಲ್ಲವೆ ?

** Copy placed in the Karnataka Legislature Library *vide* No.. 26 dated 21st June 1977.

ಶ್ರೀ ಕೆ. ಹೆಚ್. ಹನುಮೇಗೌಡ.—122 ಜನಕ್ಕೆ ಕೊಟ್ಟಿರುವ ಸೈಟಿನ ಬೆಲೆ 25 ಲಕ್ಷ ರೂಪಾಯಿ ಬರುತ್ತಿತ್ತು ಎಂದು ಕೇಳಿದ್ದೇನೆ. ಇದು ಬಹಳ ಬೆಲೆಯುಳ್ಳ ಆಸ್ತಿ. ಹಿಂದೆ ಇದ್ದ ಅಡ್ಮಿನಿಸ್ಟ್ರೇಟರ್ ಚಾರ್ಜ್ ಕೊಡುವುದಕ್ಕೆ ಮೂರು ದಿವಸ ಮುಂಚೆ ಬೆಳಿಗಿನವರೆವಿಗೂ ಕೂಳಿತು ಕೊಂಡು ಎಷ್ಟು ಸಾಧ್ಯವೋ ಅಷ್ಟು ದುಡ್ಡು ಹೊಡೆದು ದ್ರೋಹ ಮಾಡಿದ್ದಾರೆ. ಈ ವಿಚಾರದಲ್ಲಿ ನಾನು ಕಾಗದ ಬರೆದಿದ್ದೇನೆ. ಸಾರ್ವಜನಿಕರು ಕೂಡ ಅರ್ಜಿ ಬರೆದಿದ್ದಾರೆ. ಇದರ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತಪ್ಪಿತಸ್ಥ ಎಂದು ಗೊತ್ತಾದರೆ ಬಿಡ್ತಿ ಕೊಡುತ್ತೀರಾ ಸ್ವಾಮಿ

ಶ್ರೀ ಕೆ. ಹೆಚ್. ಹನುಮೇಗೌಡ.—ಸಾರ್ವಜನಿಕ ಉದ್ಯಾನವನಗಳನ್ನು ಕೂಡ ಸೈಟ್ ಮಾಡಿ ಕೊಟ್ಟಿದ್ದಾರೆ. ಡೆಪ್ಯೂಟಿ ಕಮೀಷನರ್ ಗಮನಕ್ಕೆ ತಂದಾಗ ಸ್ಟೇ ಕೊಟ್ಟು ನಿಲ್ಲಿಸಿದ್ದಾರೆ. 50-60 ಸಾವಿರ ರೂಪಾಯಿ ಉತ್ಪತ್ತಿ ಇರತಕ್ಕವರಿಗೆ ಸೈಟುಗಳನ್ನು ಕೊಟ್ಟಿರುವ ಅರ್ಥ ಏನು ? ಮಾನ್ಯ ಅಧ್ಯಕ್ಷರೇ ಬಹಳ ಸಂಕಟದಿಂದಹೇಳುತ್ತಿದ್ದೇನೆ, ಇದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ, ಅಲ್ಲದೆ ಉದ್ಯಾನ ವನಗಳನ್ನು ಸೈಟುಗಳಾಗಿ ಕೊಟ್ಟಿರುವುದನ್ನು ರದ್ದು ಮಾಡಿ ಉದ್ಯಾನವನಗಳನ್ನು ಹಾಗೆಯೇ ಉಳಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಅರ್ಜಿ ಕೊಟ್ಟಿದ್ದಾರೆ ಸಾರ್ವಜನಿಕರೂ ಕೂಡ ಮನವಿ ಮಾಡಿದ್ದಾರೆ. ನಾನು ಪೂರ್ತಿಯಾಗಿ ವಿಚಾರಣೆ ಮಾಡಿ ಕಾನೂನು ಪ್ರಕಾರ ಯಾವ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬರುತ್ತದೆ ಅದನ್ನು ಮಾಡುತ್ತೇನೆ. ಮತ್ತೆ ಪಾರ್ಕ ಕೊಟ್ಟಿರುವ ವಿಚಾರ ಗ್ರಾಂಟ್‌ನಲ್ಲಿ ಬರುತ್ತದೆ. 122 ಸೈಟುಗಳ ವಿಚಾರದಲ್ಲಿ ವೆರಿಫೈ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಇದರ ಬಗ್ಗೆ ಮುನಿಸಿಪಾಲಟಿಯವರು ಸರ್ಕಾರದಿಂದ ಮಂಜೂರಾತಿ ಪಡೆದಿದ್ದಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಕಾನೂನು ಪ್ರಕಾರ ರೆಜಲ್ಯೂಷನ್ ಮಾಡಿಕೊಡಬೇಕು, ಸರ್ಕಾರದ ಅಪ್ರೂವಲ್ ಪಡೆಯಬೇಕು ಎನ್ನುವುದು ಮಾನ್ಯಸದಸ್ಯರಾದ ತಮಗೂ ಗೊ ಆದರ ಬಗ್ಗೆ ಅನಂತರ ತಿಳಿಸುತ್ತೇನೆ ಎಂದು ನಾನು ಈಗಾಗಲೇ ಮಾನ್ಯಸದಸ್ಯರಿಗೆ ತಿಳಿಸಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಸರ್ಕಾರದ ಮಂಜೂರಾತಿ ಇಲ್ಲದೇ ಅಡ್ಮಿನಿಸ್ಟ್ರೇಟರ್ ಸೈಟುಗಳನ್ನು ಹಂಚಿಕೆ ಮಾಡಿದ್ದರೆ ತತಕ್ಷಣ ಮೂರು ಗಂಟೆಯೊಳಗೆ ಅವರಿಗೆ ತಕ್ಕ ಶಿಕ್ಷೆ ವಿಧಿಸಬೇಕು. ಸರ್ಕಾರವೇನಾದರೂ ಅಪ್ರೂವಲ್ ಕೊಟ್ಟು ಆ ರೀತಿ ಮಾಡಿದ್ದರೆ ಸರ್ಕಾರ ಕೂಡ ಇದರಲ್ಲಿ ಶಾಮೀಲಾಗಿದೆ ಎಂದು ತಿಳಿಯಬೇಕಾಗುತ್ತದೆ. ಆದುದರಿಂದ ಈ ಪ್ರಶ್ನೋತ್ತರ ಮುಗಿಯುವುದರೊಳಗೆ ಉತ್ತರ ಕೊಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ವಿಚಾರಣೆ ಮಾಡಿದ ಮೇಲೆ ಕ್ರಮ ಕೈಗೊಳ್ಳದೆ ಇದ್ದರೆ ಹೇಳಿ.

SRI KAGODU THIMMAPPA —The Hon'ble Minister is answering after the receipt of this question. Has he verified whether the Government has given prior permission for giving the sites ?

ಶ್ರೀ ಡಿ. ಕೆ. ನಾಯ್ಕರ್.—ನಾರಮರ್ ಕೋರ್ಸನಲ್ಲಿ ಹೇಳಿದ್ದೇನೆ. ಅವರು ತರಾವು ಮಾಡಿ ಯಾರು ಯಾರಿಗೆ ಕೊಡಬೇಕು ಎಂದು ಕಳುಹಿಸಿರುತ್ತಾರೆ.

SRI KAGODU THIMMAPPA —That is not the normal course. In this case has he obtained the permission of the Government ?

ಶ್ರೀ ಡಿ. ಕೆ. ನಾಯ್ಕರ್.—ನಾನು ಅದರ ಬಗ್ಗೆ ವೆರಿಫೈ ಮಾಡಿ ಹೇಳುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

SRI KAGODU THIMMAPPA.—Let him take time and answer tomorrow Otherwise the whole proceedings becomes illegal. The concerned officer has no authority to issue sale certificates and as such he has to be hauled up for misuse of power.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರಾದ ತಿಮ್ಮಪ್ಪನವರು ತಪ್ಪು ತಿಳುವಳಿಕೆಯಿಂದ ಮಾತನಾಡುತ್ತಿದ್ದಾರೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಪುರಸಭೆಯ ಮಂಜೂರಾತಿ ಆದೇಶ ಗ್ರಾಂಟ್ ಮಾಡಿದ ಕೂಡಲೇ ಗ್ರೌಮೆಂಟ್ ಅಪ್ರೂವಲ್ ಇಲ್ಲದೇ ಸೇಲ್ ಸರ್ಟಿಫಿಕೇಟ್ ಕೊಡಲಿಕ್ಕೆ ಬರುವದಿಲ್ಲ. ಇಪ್ಪೊತ್ತು ರೆಜಲ್ಯೂಷನ್ ಮಾಡಿ ಅಪ್ರೂವರ್‌ಗೆ ಕಳುಹಿಸಿದ ಕೂಡಲೇ ಗ್ರಾಂಟ್ ಎಂದು ತಿಳಿದುಕೊಳ್ಳುತ್ತಾರೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಸದಸ್ಯರಿಗೆ ಅನಂತರ ತಿಳಿಸುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ಕಳೆದ ಒಂದು ವರ್ಷದಿಂದ 122 ನಿವೇಶನಗಳನ್ನು ಮಂಜೂರ್ಮಾಡಲಾಗಿದೆ ಎಂದು ತಿಳಿಸಿದ್ದೀರಿ, ಆದ್ದರಿಂದ ಇದರ ಬಗ್ಗೆ, ಠರಾವು ಆಗಿ ಸರ್ಕಾರ ಇದಕ್ಕೆ ಮಂಜೂರಾತಿ ಕೊಟ್ಟಿದೆಯೇ ಇಲ್ಲವೇ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸ ಬೇಕಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್.—ಅಧ್ಯಕ್ಷರೇ, ಪ್ರಶ್ನೆ ಕೇಳಿದಂತಹ ಮಾನ್ಯಸದಸ್ಯರಾದ ಹನುಮೇಗೌಡರಿಗೆ ಇದರ ಬಗ್ಗೆ ವಿವರವಾಗಿ ಹೇಳುತ್ತೇನೆ ಎಂದು ಈ ಹಿಂದೆಯೇ ಹೇಳಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.— ಅಧ್ಯಕ್ಷರೇ, ಹಾಗಾದರೆ ಈ ಪ್ರಶ್ನೆಯನ್ನು ತಡೆಹಿಡಿಯಬೇಕು.

ಅಧ್ಯಕ್ಷರು.—ಈ ಪ್ರಶ್ನೆಯನ್ನು ತಡೆಹಿಡಿಯುವುದರ ಬಗ್ಗೆ ಮಾನ್ಯಮಂತ್ರಿಗಳು ಏನು ಹೇಳುತ್ತೀರಿ ?

ಶ್ರೀ ಡಿ ಕೆ. ನಾಯ್ಕರ್.—ತಡೆಹಿಡಿಯುವುದರ ಬಗ್ಗೆ ನನ್ನ ತಕರಾರು ಏನು ಇಲ್ಲ.

ಅಧ್ಯಕ್ಷರು.—ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Irregularities in Chickballapur Municipal Council

448. SRI C. BYREGOWDA (Vemgal).— Will the Minister for Municipal Administration and Political Pensions be pleased to state:-

(*a*) the irregularities pointed out in the Chickballapur Municipal Audit reports for the year 1971-72 and 1972-73 causing financial loss to the council ;

(*b*) the action Government have taken for the recovery of this loss to the Municipality ?

SRI D. K. NAIKAR (Minister for Municipal Administration and Political Pensions. —

(*a*) As per the report of the Controller, State Accounts Department on the accounts of T.M.C. Chickballapur for 1972-73 and Municipal College for 1971-72 and 1972-73 the Financial loss caused is Rs, 69,278-37.

(*b*) Surcharge proceedings are under progress.